## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1270 |
| ಸದಸ್ಯರ ಹೆಸರು | ಡಾ: ಜೈಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 17.03.2020. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆಗಳು – | ಉತ್ತರ |
|---|---|---|

**ಅ)** ಕಳದ 03 ವರ್ಷಗಳಿಂದ ರಾಜ್ಯದಲ್ಲಿ ಗಣಿಗಾರಿಕೆ ನಡೆಸಲು ಎಷ್ಟು ಕೇಂದ್ರಗಳಿಗೆ ಅನುಮತಿಯನ್ನು ನೀಡಲಾಗಿದೆ; ಇದರಿಂದ ಸರ್ಕಾರಕ್ಕೆ ಬಂದಿರುವ ಒಟ್ಟು ಆದಾಯ ಎಷ್ಟು;

**ಉತ್ತರ:**

ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಈ ಕೆಳಕಂಡಂತೆ ಮುಖ್ಯ ಖನಿಜ ಮತ್ತು ಉಪಖನಿಜಗಳ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ.

| ಕ್ರ ಸಂ. | ಖನಿಜದ ವಿಧ | ಮಂಜೂರು ಮಾಡಿರುವ ಗಣಿ ಗುತ್ತಿಗೆಗಳ ಸಂಖ್ಯೆ | ವಿಸ್ತೀರ್ಣ (ಎಕರೆ/ಗುಂಟೆಗಳಲ್ಲಿ) |
|---|---|---|---|
| 1. | ಮುಖ್ಯ ಖನಿಜ (ಕಬ್ಬಿಣದ ಅದಿರು) | 07 | 1083.04 |
| 2. | ನಿರ್ದಿಷ್ಟ ಉಪ ಖನಿಜ (ಗ್ರಾನೈಟ್) | 71 | 313.22 |
| 3. | ನಿರ್ದಿಷ್ಟವಲ್ಲದ ಉಪ ಖನಿಜ (ಕಟ್ಟಡ ಕಲ್ಲು, ಮುರ್ರಂ ಇತ್ಯಾದಿ) | 890 | 2672.04 |
| 4. | ಮರಳು | 281 | 3632.17 |

ಕಳೆದ 3 ವರ್ಷಗಳಿಂದ ಗಣಿಗಾರಿಕೆಯಿಂದ ಸಂಗ್ರಹವಾಗಿರುವ ರಾಜಸ್ವದ ವಿವರ ಕೆಳಕಂಡಂತಿರುತ್ತದೆ.

(ರೂ.ಕೋಟಿಗಳಲ್ಲಿ)

| ಕ್ರ.ಸ. | ವರ್ಷ | ಸಂಗ್ರಹಣೆ |
|---|---|---|
| 1. | 2017–18 | 2746.26 |
| 2. | 2018–19 | 3026.42 |
| 3. | 2019–20 (15-02-2020ರ ವರೆಗೆ) | 2979.40 |

**ಆ)** ಇದರಲ್ಲಿ ಅಧಿಕೃತ ಕೇಂದ್ರಗಳು ಸೇರಿದಂತೆ ಅನಧಿಕೃತ ಕೇಂದ್ರಗಳು ಎಷ್ಟು ಕಾರ್ಯನಿರ್ವಹಿಸುತ್ತಿವೆ: ಇವುಗಳ ವಿರುದ್ಧ ಸರ್ಕಾರವು ಯಾವ ರೀತಿ ಕ್ರಮ ಕೈಗೊಂಡಿದೆ;

**ಉತ್ತರ:**

ಅಧಿಕೃತವಾಗಿ ಗಣಿಗಾರಿಕೆಗೆ ಗುತ್ತಿಗೆ ನೀಡಿರುವ ಪ್ರದೇಶಗಳನ್ನು ಹೊರತುಪಡಿಸಿ ಅನಧಿಕೃತವಾಗಿ ಕೆಲವು ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಯುತ್ತಿರುವುದು ಕಂಡು ಬಂದಿರುತ್ತದೆ.

ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಎಂ.ಎಂ.(ಡಿ &ಆರ್) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಮೊಕದ್ದಮೆಗಳನ್ನು ದಾಖಲಿಸಲು ಕ್ರಮ ಜರುಗಿಸಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಕಲ್ಲು ಮತ್ತು ಮರಳು ಗಣಿಗಾರಿಕೆ ಸಂಬಂಧ ಕೈಗೊಂಡ ಕ್ರಮದ ವಿವರ ಕೆಳಕಂಡಂತಿದೆ:

**ಮುಖ್ಯ ಖನಿಜ ಗಣಿಗಾರಿಕೆ :–**

| ಕ್ರ ಸಂ. | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳು | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ | ವಸೂಲಾದ ದಂಡ (ರೂ.ಲಕ್ಷಗಳಲ್ಲಿ) |
|---|---|---|---|---|
| 1. | 2017–18 | 01 | – | 0.5 |
| 2. | 2018–19 | 05 | – | 2.0 |
| 3. | 2019–20 | 02 | – | – |

ಕಲ್ಲು ಗಣಿಗಾರಿಕೆ :-

| ಕ್ರ ಸಂ. | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳು | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ | ವಸೂಲಾದ ದಂಡ (ರೂ.ಲಕ್ಷಗಳಲ್ಲಿ) |
|---|---|---|---|---|
| 1. | 2017–18 | 404 | 114 | 613.25 |
| 2. | 2018–19 | 413 | 108 | 1213.37 |
| 3. | 2019–20 | 266 | 117 | 908.70 |
| | ಒಟ್ಟು | **1083** | **339** | **2735.32** |

ಮರಳು ಗಣಿಗಾರಿಕೆ:-

| ಕ್ರ ಸಂ. | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳು | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ | ವಸೂಲಾದ ದಂಡ (ರೂ.ಲಕ್ಷಗಳಲ್ಲಿ) |
|---|---|---|---|---|
| 1. | 2017–18 | 4007 | 2692 | 2073.36 |
| 2. | 2018–19 | 3869 | 2893 | 910.38 |
| 3. | 2019–20 | 1590 | 938 | 296.08 |
| | ಒಟ್ಟು | **9466** | **6523** | **3279.82** |

| | | |
|---|---|---|
| ಇ) | ಈ ರೀತಿಯ ಗಣಿಗಾರಿಕೆಯಿಂದ ಕಷ್ಟವನ್ನು ಅನುಭವಿಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ಎಷ್ಟು ದೂರುಗಳನ್ನು ಸ್ವೀಕರಿಸಲಾಗಿದೆ; ಈ ಸಮಸ್ಯೆಯ ಪರಿಹಾರಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ? | 2019–20ನೇ ಸಾಲಿನಲ್ಲಿ ಕಲ್ಲು ಗಣಿಗಾರಿಕೆಯಿಂದ ತೊಂದರೆ ಉಂಟಾಗುವುದಾಗಿ 335 ದೂರುಗಳು ಸ್ವೀಕೃತವಾಗಿರುತ್ತವೆ. ಸದರಿ ದೂರಿನ ಅಂಶಗಳನ್ವಯ ಜಿಲ್ಲಾ ಕಛೇರಿಯ ಅಧಿಕಾರಿಗಳು / ಚಾಲಿತ ದಳದ ಅಧಿಕಾರಿಗಳಿಂದ ಗಣಿ / ಕಲ್ಲುಗಣಿ ಪ್ರದೇಶವನ್ನು ಸ್ಥಳ ಪರಿಶೀಲನೆ ನಡೆಸಿ ಸಾರ್ವಜನಿಕರಿಗೆ ತೊಂದರೆ ಉಂಟಾಗದಂತೆ ನಿಯಮಾನುಸಾರ ಗಣಿಗಾರಿಕೆ ನಡೆಸುವಂತೆ ಗುತ್ತಿಗೆದಾರರಿಗೆ ಸೂಚಿಸಿ, ಸೂಕ್ತ ಕ್ರಮ ವಹಿಸಲಾಗಿರುತ್ತದೆ. |

ಸಂಖ್ಯೆ: ಸಿಐ 155 ಎಂಎಂಎನ್ 2020

(ಸಿ.ಸಿ. ಪಾಟೀಲ)

ಗಣಿ ಮತ್ತು ಭೂವಿಜ್ಞಾನ ಸಚಿವರು